Ref.No. 37/2019

MW-1,

ದಿನಾಂಕಃ 07-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಪಿ ಪಿ ಬಿ ಆರ್ ವಕೀಲರಿಂದ ಃ

1 ನೇ ಪಾರ್ಟಿ ಯೂನಿಯನ್ ಅನ್ನು ಪ್ರಾರಂಭಸಿದಾಗ 2 ನೇ ಪಾರ್ಟಿ ಸಂಸ್ಥೆಯು ಅದಕ್ಕೆ ಮಾನ್ಯತೆಯನ್ನು ನೀಡಿತ್ತು ಎಂದರೆ ಸರಿ ಅದು ಕಾಯಂ ಕಾರ್ಮಿಕ ರು ಪ್ರಾರಂಭಿಸಿದ ಯೂನಿಯನ್ ಆಗಿತ್ತು ಎಂದರೆ ಸರಿ . ಆಗ ಸುಮಾರು 200 ಕಾಯಂ ಕಾರ್ಮಿಕ ರು ಸಂಘದ ಸದಸ್ಯತ್ವವನ್ನು ಪಡೆದುಕೊಂಡಿದ್ದರು ಎಂದರೆ ಸರಿ . ಸಂಸ್ಥೆಯ ದೃಡೀಕೃತ ಸ್ಥಾಯಿ ಆದೇಶಕ್ಕೆ 1 ನೇ ಪಾರ್ಟಿ ಸಹಿ ಮಾಡಿರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ದೃಡೀಕೃತ ಸ್ಥಾಯಿ ಆದೇಶ 2002 ರಲ್ಲಿ ಬಂದಿದ್ದು ಆಗ ಸಂಸ್ಥೆಯಲ್ಲಿ ಯೂನಿಯನ್ ಇರಲಿಲ್ಲಿ ಎಂದು ನುಡಿಯುತ್ತಾರೆ .

technical training and fixed term employees ಅನ್ನು ಮುಗಿಸಿದ ಕಾರ್ಮಿಕ ರ ಕೆಲಸವನ್ನು ನಾವು ತಕ್ಷಣ ಹಲವಾರು ಸಂದರ್ಬದಲ್ಲಿ ಕಾಯಂಗೊಳಿಸಿರುತ್ತೇವೆ . ಆ ರೀತಿ ಕಾಯಂ ಗೊಳಿಸಿದ ಕಾರ್ಮಿಕ ರ ಪಟ್ಟಿಯನ್ನು ಈ ನ್ಯಾಯಾಧೀಕರಣ ದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಈ ಪ್ರಕರಣ ದಲ್ಲಿ ಉಳಿದುಕೊಂಡ ಕಾರ್ಮಿಕರಲ್ಲಿ 12 ಜನ technical trainees and 2 ಜನ fixed term employees ಇರುತ್ತಾರೆ ಎಂದರೆ ಸರಿ . ಈ ಪ್ರಕರಣ ದ ಕಾರ್ಮಿಕರು ನ್ಯಾಯ ಸಿಗುವ ಉದ್ದೇಶದಿಂದ 1 ನೇ ಪಾರ್ಟಿ ಯೂನಿಯನ್ ನ ಸದಸ್ಯತ್ವವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ನುಡಿಯುತ್ತಾರೆ . ಈ ಪ್ರಕರಣದ ಕಾರ್ಮಿಕರು ತಮ್ಮ ಕೆಲಸವನ್ನು ಕಾಯಂಗೊಳಿಸುವಂತೆ 2 ನೇ ಪಾರ್ಟಿ ಸಂಸ್ಥೆ ಗೆ ಅರ್ಜಿಯನ್ನು ಸಲ್ಲಿದ್ದರು ಎಂದರೆ ಸರಿ . ಸದರಿ ಮನವಿಯನ್ನು ಸಂಸ್ಥೆಯು ನಿರಾಕರಿಸಿರುತ್ತದೆ ಎಂದರೆ ಸರಿ . ಆದುದರಿಂದ 1 ನೇ ಪಾರ್ಟಿಯವರು ಉಪಕಾರ್ಮಿಕ ಆಯುಕ್ತರ ಮುಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ಆಗ ನಾವು ಅಲ್ಲಿ ತಕರಾರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ತಕರಾರಿನಲ್ಲಿ ಕಾರ್ಮಿಕರನ್ನು ಕಾಯಂಗೊಳಿಸುವ ಪ್ರಕ್ರಿಯೆಯನ್ನು ಮಾಡಲಾಗುವುದು ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿದಾರರು ಟ್ರೈನಿಗಳ ವಿಚಾರವನ್ನು ಯೂನಿಯನ್ ಮೂಲಕ ಇತ್ಯರ್ಥ ಪಡಿಸಲು ಸಾಧ್ಯವಿಲ್ಲ ಸದರಿ ಟ್ರೈನಿಗಳನ್ನು ಕಾಯಂಗೊಳಿಸುವುದರ ಬಗ್ಗೆ ಸಂಸ್ಥೆಯು ನಿರ್ದಾರ ಕೈಗೊಳ್ಳುವುದು ಎಂದು ತಕರಾರನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ . ಡಿ ಎಲ್ ಸಿ ಯವರ ಮುಂದೆ ಟ್ರೈನಿಗಳ ಟ್ರೈನಿಂಗ್ ಪೀರಿಯಡ್ ಅನ್ನು ಮುಂದುವರೆಸಿದ ದಾಖಲಾತಿಗಳನ್ನು ಸಲ್ಲಿಸುವ ಅವಶ್ಯಕತೆ ಬಂದಿರುವುದಿಲ್ಲ. ನಂತರ ಕಾಯಂ ಕಾರ್ಮಿಕ ರನ್ನು 1 ನೇ ಪಾರ್ಟಿ ಯೂನಿಯನ್ ನಿಂದ ಹೊರಬರುವಂತೆ ಪ್ರೇರೇಪಿಸಿರುತ್ತೇವೆ ಎಂದರೆ ಸರಿಯಲ್ಲ. ಕಾಯಂ ನೌಕರರಿಗೆ ಯೂನಿಯನ್ ನಲ್ಲಿ ಸದಸ್ಯತ್ವವನ್ನು ಮುಂದುವರೆಸಿದ್ದಲ್ಲಿ ಸಂಘಕ್ಕೆ ನೀಡಿದ ಮಾನ್ಯತೆ ಮತ್ತು ವೇತನ ಪರಿಷ್ಕರಣೆಯನ್ನು ಮಾಡಲಾಗುವುದಿಲ್ಲ ಎಂದು ಕೂಡ ಹೇಳಿರುತ್ತೇವೆ ಎಂದರೆ ಸರಿಯಲ್ಲ

ನಂತರ ಎ ಟಿ ಅಂಡ್ ಎಸ್ ಇಂಡಿಯ ಪ್ರೈ ಲಿ ವರ್ಕರ್ಸ್ ಯೂನಿಯನ್ ಸ್ಥಾಪಿಸಲು ಕಾಯಂ ನೌಕರರಿಗೆ ಪ್ರೇರೇಪಿಸಿ ಯಶಸ್ವಿಯಾಗಿರುತ್ತೇವೆ ಎಂದರೆ ಸರಿಯಲ್ಲ . ಸದರಿ ಹೊಸತಾಗಿ ಸ್ಥಾಪಿಸಿದ ಯೂನಿಯನ್ ಸಂಸ್ಥೆಯು ಮಾನ್ಯತೆಯನ್ನು ನೀಡಿರುತ್ತೇವೆ ಎಂದರೆ ಸರಿ . ಈಗಲು ಸದರಿ ಯೂನಿಯನ್ ಗೆ ಮಾನ್ಯತೆಯನ್ನು ಮುಂದುವರೆಸಿರುತ್ತೇವೆ ಎಂದರೆ ಸರಿ . ಹೆಚ್ಚಿನ ಕಾರ್ಮಿಕರು ಇರುವ ಯೂನಿಯನ್ ಗೆ ಮಾನ್ಯತೆಯನ್ನು ನೀಡಲಾಗುತ್ತದೆ ಎಂದರೆ ಸರಿ . ಆದುದರಿಂದ ಸದರಿ ಹೊಸತಾಗಿ ಸ್ಥಾಪಿಸಲ್ಪಟ್ಟ ಯೂನಿಯನ್ ನೀಡಿದ ಮಾನ್ಯತೆಯು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಮಹದೇವಸ್ವಾಮಿ ಎಂಬ ಕಾರ್ಮಿಕ ನಿಗೆ ಕೋವಿಡ್ ಸಮಯದಲ್ಲಿ ನೋಟೀಸ್ ನ್ನು ನೀಡಿರುತ್ತೇವೆ ಎಂದರೆ ಸರಿ . ಸದರಿ ನೋಟೀಸ್ ನ್ನು ಪ್ರಶ್ನಿಸಿದ 35 ಕಾರ್ಮಿಕ ರಿಗೂ ಕೂಡ ನಾವು ನೋಟೀಸನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನೋಟೀಸನ್ನು ಬೇರೆ ಪ್ರಕರಣಕ್ಕೆ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ ಸದರಿ 35 ಕಾರ್ಮಿಕರಿಗೆ ನೀಡಿದ ನೋಟೀಸನ್ನು ಪ್ರಶ್ನಿಸಿದ ಇನ್ನೂ 35 ಕಾರ್ಮಿಕ ರು ಉಪವಾಸ ಮಾಡಿದ್ದರಿಂದ ಸದರಿ 35 ಕಾರ್ಮಿಕರಿಗೂ ಕೂಡ ನೋಟೀಸನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನೋಟೀಸನ್ನು ಬೇರೆ ಪ್ರಕರಣಕ್ಕೆ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ . ಆ ರೀತಿ ನೋಟೀಸನ್ನು ನೀಡಿ 80 ಜನ ಕಾರ್ಮಿಕರನ್ನು ವಜಾಗೊಳಿಸಿರುತ್ತೇವೆ ಎಂದರೆ ಸರಿಯಲ್ಲ . ಆ ರೀತಿ ವಜಾಗೊಳಿಸಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಬೇರೆ ಪ್ರಕರಣಕ್ಕೆ ಸಂಬಂಧಸಿದ್ದಾಗಿರುತ್ತದೆ ವಜಾಗೊಳಿಸಲಾಗಿರುತ್ತದೆ ಎಂದು ನುಡಿಯುತ್ತಾರೆ . ವಜಾಗೊಳಿಸಿದ ಕಾರ್ಮಿಕರು ಈ ಪ್ರಕರಣದಲ್ಲಿಯೂ ಇದ್ದರು ಎಂದರೆ ಕೆಲವರು ಇದ್ದರು ಎಂದು ನುಡಿಯುತ್ತಾರೆ . ಈ ಪ್ರಕರಣದ ಕೆಲವೊಂದು ಕಾರ್ಮಿಕರೊಂದಿಗೆ ಸಂಧಾನ ನಡೆಸಿ ಅವರಿಗೆ 4 ರಿಂದ 8 ಲಕ್ಷ ರೂಪಯಿಗಳನ್ನು ನೀಡಿ ಸೆಟ್ಲಮೆಂಟ್ ಮಾಡಿಕೊಂಡಿರುತ್ತೇವೆ ಎಂದರೆ ಸರಿ .

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.